ಅನಧಿಕೃತ ನಿವೇಶನಗಳಿಗೆ ವಿದ್ಯುತ್ ಸರಬರಾಜು

4457 - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಬಡಾವಣೆಗಳಿಗೆ ವಿದ್ಯುತ್ ಸರಬರಾಜು ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಆ) ಅನಧಿಕೃತವಾಗಿ ನಿವೇಶನ ಮನೆಗಳು ಕಟ್ಟಿಸಿಕೊಂಡವರಿಗೆ ವಿದ್ಯುತ್ ಸರಬರಾಜು ಮಾಡುವಲ್ಲಿ ಅಧಿಕಾರಿಗಳು ಹೆಚ್ಚಿನ ತೊಂದರೆ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಕೈಗೊಂಡ ಕ್ರಮವೇನು ?

ಇ) ಇಂತಹ ಬಡಾವಣೆಗಳನ್ನು ಸರ್ವೆ ಮಾಡಿ ಅತೀ ಕಡಿಮೆ ದರದಲ್ಲಿ ವಿದ್ಯುತ್ ಜೋಡಣೆ ಮಾಡುವಂತೆ ಸರ್ಕಾರದಿಂದ ಸುತ್ತೋಲೆ ಕಳುಹಿಸಲಾಗಿದೆಯೇ ? ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ಪ್ರಸ್ತುತ ಜಾರಿಯಲ್ಲಿರುವ ನಿಗಮದ ನಿಯಮದಂತೆ ಬಡಾವಣೆಗಳ ವಿದ್ಯುದೀಕರಣ ಕೆಲಸವನ್ನು ಆ ಬಡಾವಣೆಗಳ ಅಭಿವೃದ್ಧಿದಾರನೇ ಸ್ವಯಂ ನಿರ್ವಹಿಸಬೇಕಾಗುತ್ತದೆ. ಆದರೆ, ಬಡಾವಣೆಯ ಅಭಿವೃದ್ಧಿದಾರನು ನಿವೇಶನಗಳನ್ನು ವಿತರಿಸಿದ ನಂತರ ಬಡಾವಣೆಯ ವಿದ್ಯುದೀಕರಣದ ಬಗ್ಗೆ ಯಾವುದೇ ಆಸಕ್ತಿ, ತೋರಿಸದಿರುವ ಸಂದರ್ಭಗಳಲ್ಲಿ ಅಥವಾ ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸದೆಯೇ ನಾಪತ್ತೆಯಾಗುವ ಸಂದರ್ಭಗಳಲ್ಲಿ, ನಿವೇಶನದಾರರಿಗೆ ಆಗುವ ತೊಂದರೆಯನ್ನು ಗಮನಿಸಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಬಡಾವಣೆಗಳೂ ಸೇರಿದಂತೆ ರಾಜ್ಯದಲ್ಲಿರುವ ಇಂತಹ ಬಡಾವಣೆಗಳಲ್ಲಿ ಮನೆ ನಿರ್ಮಿಸಿಕೊಂಡಿರುವವರು ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸಿದಲ್ಲಿ ಇವರುಗಳಿಂದ ಮೂಲಭೂತ ವ್ಯವಸ್ಥೆ ಅಭಿವೃದ್ಧಿ ಶುಲ್ಕವನ್ನು (ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಚಾರ್ಜ್) ಪಡೆದು ನಿಗಮದ ಇತರ ನಿಯಮಗಳನ್ನು ಪಾಲಿಸಿದ ನಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುತ್ತದೆ.

ಆ) ಮೇಲೆ ವಿವರಿಸಿರುವಂತೆ ಇಂತಹ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಪಡೆಯಲು ಪ್ರಸ್ತುತ ಜಾರಿಯಲ್ಲಿರುವ ನಿಗಮದ ನಿಯಮಗಳನ್ನು ನಿವೇಶನದಾರರು ಪಾಲಿಸಿದ ನಂತರ ಕೂಡಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗುತ್ತದೆ. ಒಂದು ವೇಳೆ, ಈ ರೀತಿ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ ಕ್ಷೇತ್ರಾಧಿಕಾರಿಗಳು ಸ್ಪಷ್ಟೀಕರಣ ಅಪೇಕ್ಷಿಸಿದಲ್ಲಿ ನಿಗಮದ ಕಾರ್ಪೊರೇಟ್ ಕಛೇರಿಯು ಸ್ಪಷ್ಟೀಕರಣವನ್ನು ನೀಡುತ್ತಿದೆ. ನಿವೇಶನದಾರರಿಗೆ ತೊಂದರೆಯಾಗದಂತೆ ನಿಗಮವು ಕಾಳಜಿ ವಹಿಸುತ್ತಿದೆ.

ಇ) ಹೌದು, ರಾಜ್ಯದ ವಿವಿಧ ಪ್ರದೇಶಗಳಲ್ಲಿ ಬರುವ ಇಂತಹ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸುವ ಸಲುವಾಗಿ ಪಡೆಯಬೇಕಾಗಿರುವ ಮೂಲಭೂತ ವ್ಯವಸ್ಥೆ ಅಭಿವೃದ್ಧಿ ಶುಲ್ಕವನ್ನು

(ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಚಾರ್ಜ್) ನಿಗದಿಪಡಿಸಿ ನಿಗಮವು ದಿನಾಂಕ 18.10.2000ದ ಸುತ್ತೋಲೆಯ ಮೂಲಕ ತನ್ನ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಿರುತ್ತದೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮತ್ತು ಅದರ ಅಗ್ಲೊಮೆರೇಷನ್ ವ್ಯಾಪ್ತಿಯಲ್ಲಿ ಬರುವ ಇಂತಹ ಬಡಾವಣೆಗಳಲ್ಲಿ ವಿದ್ಯುತ್ ಸಂಪರ್ಕ ಕೋರಿ ಅರ್ಜಿ ಸಲ್ಲಿಸುವ ಅರ್ಜಿದಾರರುಗಳಿಂದ ಕಡಿಮೆ ದರದಲ್ಲಿಯೇ ಅಂದರೆ 30 x 40" (1200ಚ.ಅ.) ಅಳತೆ ಅಥವಾ ಅದಕ್ಕಿಂತ ಕಡಿಮೆ ಅಳತೆ ಇರುವ ನಿವೇಶನವನ್ನು ಹೊಂದಿರುವ ಅರ್ಜಿದಾರರುಗಳಿಂದ ಪ್ರತಿ ಕಿ.ವ್ಯಾ.ಗೆ. 4000 ರೂ.ಗಳಂತೆ ಮೂಲಭೂತ ವ್ಯವಸ್ಥೆ ಅಭಿವೃದ್ಧಿ ಶುಲ್ಕವನ್ನು ಪಡೆಯಲಾಗುತ್ತದೆ. 30' x 40' (1200 ಚ.ಅ) ಗಿಂತ ಜಾಸ್ತಿ ಅಳತೆ ಇರುವ ನಿವೇಶನವನ್ನ ಹೊಂದಿರುವ ಅರ್ಜಿದಾರರುಗಳಿಂದ ಪ್ರತಿ ನಿವೇಶನಕ್ಕೆ ಕನಿಷ್ಠ 12000-00 ರೂ.ಗಳ ನಿಬಂಧನೆಗೊಳಪಟ್ಟು ಪ್ರತಿ ಕಿ.ವ್ಯಾಗೆ 4000-00 ರೂ. ಗಳಂತೆ ಮೂಲಭೂತ ವ್ಯವಸ್ಥೆ ಅಭಿವೃದ್ಧಿ ಶುಲ್ಕವನ್ನು ಪಡೆಯಲಾಗುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಸೀಮೆ ಎಣ್ಣೆ ವಿತರಣೆ

4458 - ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ (ಸದಲಗ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಲೀಟರ್ ಸೀಮೆ ಎಣ್ಣೆಯನ್ನು ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಣೆ ಮಾಡಲಾಗುವುದು? (ತಾಲ್ಲೂಕುವಾರು ವಿವರಣೆ ನೀಡುವುದು)

ಆ) ಗ್ರಾಮೀಣ ಪ್ರದೇಶದಲ್ಲಿನ ಒಂದು ಕಾರ್ಡಿಗೆ ಎಷ್ಟು ಲೀಟರ್ ಹಾಗೂ ನಗರ ಪ್ರದೇಶದಲ್ಲಿನ ಕಾರ್ಡಿಗೆ ಎಷ್ಟು ಲೀಟರ್ ಸೀಮೆಎಣ್ಣೆ ವಿತರಣೆ ಮಾಡಲಾಗುವುದು ಹಾಗೂ ಒಂದು ಲೀಟರಿನ ಬೆಲೆ ಎಷ್ಟು?

ಇ) ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವಿತರಣೆ ಮಾಡುವುದು ಏಕರೂಪವಾಗಿದೆಯೇ ಅಥವಾ ತಾರತಮ್ಯ ಇದೆಯೇ?

ಈ) ತಾರತಮ್ಯ ಇದ್ದಲ್ಲಿ ಕಾರಣಗಳೇನು?

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) :

ಅ) ಪ್ರತಿ ಮಾಹೆ 4152 ಕಿಲೋ ಲೀಟರ್‌ಗಳು. ತಾಲ್ಲೂಕುವಾರು ವಿವರಣೆ ಈ ಕೆಳಕಂಡಂತಿದೆ.

1.	ಬೆಳಗಾವಿ	847.882 ಕೆ.ಎಲ್
2.	ಹುಕ್ಕೇರಿ	337.971 "
3.	ರಾಯಭಾಗ	279.924 "
4.	ಖಾನಾಪುರ	231.690 "